1. ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯ 2001–02ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

**ಡಾ: ಜಿ. ಪರಮೇಶ್ವರ್ (ಉನ್ನತ ಶಿಕ್ಷಣ ಸಚಿವರು):** ಮಾನ್ಯ ಅಧ್ಯಕ್ಷರೆ,

**1976ರ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯದ ಅಧಿನಿಯಮ 45(2), 47(4)ನೇ ಪ್ರಕರಣದ ಮೇರೆಗೆ:**

2. ಗುಲ್ಬರ್ಗಾ ವಿಶ್ವವಿದ್ಯಾನಿಲಯದ 2000–01ನೇ ಸಾಲಿನ ವಾರ್ಷಿಕ ಮತ್ತು 1999–2000ನೇ ಮತ್ತು 2000–01ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನಾ ವರದಿ.

3. ಬೆಂಗಳೂರು ವಿಶ್ವವಿದ್ಯಾನಿಲಯದ 2001–02ನೇ ಸಾಲಿವ ವಾರ್ಷಿಕ ವರದಿ.

4. ಮೈಸೂರು ವಿಶ್ವವಿದ್ಯಾನಿಲಯದ 2000–01ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನಾ ವರದಿ ಮತ್ತು ಲೆಕ್ಕಪತ್ರಗಳು.

5. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, 1996–97, 1997–98, 1998–99, 1999–2000, 2000–01 ಹಾಗೂ 2001–02ನೇ ಸಾಲಿನ ವಾರ್ಷಿಕ ವರದಿಗಳು.

6. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು 2000–01ನೇ ಸಾಲಿನ ಲೆಕ್ಕ ತನಿಖಾ ವರದಿ ಮತ್ತು ವಾರ್ಷಿಕ ಲೆಕ್ಕಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

**ಅಧ್ಯಕ್ಷರು:–** ಮಂಡಿಸಲಾಯಿತು.

## 3. ವರದಿಗಳನ್ನೊಪ್ಪಿಸುವುದು

**ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):–** ಮಾನ್ಯ ಅಧ್ಯಕ್ಷರೆ, 2002ನೇ ಇಸವಿಯ ಕರ್ನಾಟಕ ಪಂಚಾಯತ್ ರಾಜ್ ತಿದ್ದುಪಡಿ ವಿಧೇಯಕದ, ಜಂಟಿ ಪರಿಶೀಲನಾ ಸಮಿತಿಯ ವರದಿಯನ್ನು ಸಭೆಗೆ ಒಪ್ಪಿಸುತ್ತಿದ್ದೇನೆ.

**ಅಧ್ಯಕ್ಷರು:–** ವರದಿಯನ್ನು ಒಪ್ಪಿಸಲಾಯಿತು.

## 4. ಅಧ್ಯಕ್ಷರ ಅಪ್ಪಣೆ ಮೇರೆಗೆ

**ಶ್ರೀ ಪಿ.ಜಿ.ಆರ್. ಸಿಂಧ್ಯಾ:** ಮಾನ್ಯ ಅಧ್ಯಕ್ಷರೆ, ಶೂನ್ಯ ವೇಳೆಯಲ್ಲಿ ನಾನು ಒಂದು ವಿಚಾರವನ್ನು....

**ಅಧ್ಯಕ್ಷರು:–** ಸ್ವಲ್ಪ ತಾಳಿ. ಮಾನ್ಯ ಸೋಮಶೇಖರ್‌ರವರು ನಿನ್ನೆ ಪ್ರಿವಿಲೇಜ್ ಮೋಷನ್‌ನ್ನು ಮೂವ್ ಮಾಡಿದ್ದಾರೆ, I have to give preference to that ಅವರು ಮೂವ್ ಮಾಡಿದ್ದಾರೆ. ಮೊದಲು ಪ್ರಿವಿಲೇಜ್ ಮೋಷನ್‌ಗೆ ಅವಕಾಶ ಅನಂತರ ತಮ್ಮದು.

**ಶ್ರೀ ಪಿ.ಜಿ.ಆರ್ ಸಿಂಧ್ಯಾ:–** ಹೌದು, ಮೊದಲು ಪ್ರಿವಿಲೇಜ್ ಮೋಷನ್‌ಗೆ, ಪ್ರಿಸಿಡೆಂಟ್ ಇರುವುದು ಪ್ರಿವಿಲೇಜ್ ಮೋಷನ್‌ಗೆ ಕೊಡುವುದು, ದಯವಿಟ್ಟು ಕೊಡಿ.

**ಶ್ರೀ ಬಿ. ಸೋಮಶೇಖರ್:–** ಮಾನ್ಯ ಅಧ್ಯಕ್ಷರೆ, ಅದರ ಬಗ್ಗೆ ಸಬ್ಜೆಕ್ಟ್ ಮೇಲೆ ಮಾತನಾಡುವಾಗಲೇ ಮಾತನಾಡುತ್ತೇನೆ.

**Mr. Speaker:-** Very good. ಒಳ್ಳೆಯದು.

**ಶ್ರೀ ಪಿ.ಜಿ.ಆರ್. ಸಿಂಧ್ಯಾ:–** ನಾನು ಶೂನ್ಯ ವೇಳೆಯಲ್ಲಿ ತಮಗೆ ಒಂದು ಪತ್ರವನ್ನು ಕೊಟ್ಟಿದ್ದೇನೆ ದಯಮಾಡಿ ಅವಕಾಶ ಮಾಡಿಕೊಡಿ.

**ಅಧ್ಯಕ್ಷರು:–** ತಮಗೂ ಅವಕಾಶ ಕೊಡುತ್ತೇನೆ.

**ಶ್ರೀ ಡಿ.ಬಿ. ಚಂದ್ರೇಗೌಡ:–** ಹಾಗಾದರೆ ಪ್ರಿವಿಲೇಜ್ ಏನಾಯಿತು?

**ಅಧ್ಯಕ್ಷರು:–** ಜನರಲ್ ಆಗಿ ಮಾತನಾಡುತ್ತೇನೆಂದು ಮಾನ್ಯ ಸೋಮಶೇಖರ್‌ರವರು ಹೇಳಿದರು.

**ಶ್ರೀ ಡಿ.ಬಿ. ಚಂದ್ರೇಗೌಡ:–** ಅಂದರೆ it is closed?

**Mr. Speaker:-** It has been withdrawn.

**Sri D.B. Chandra Gowda: (Minister for Law and Parliamentary Affairs):-** Please announce that.

**ಅಧ್ಯಕ್ಷರು:–** ಅವರು ಅದನ್ನು ವಾಪಸ್ ಪಡೆದಿದ್ದಾರೆ. ಮಾನ್ಯ ಸಿಂಧ್ಯಾರವರೇ, 14ನೇ ತಾರೀಖು ಕೊಟ್ಟಿದ್ದಾರೆ, 14, 15 ರದ್ದು ಇದೆ. ಮೊದಲು ಯಾರಿಗೆ ಆದ್ಯತೆ ಕೊಡಬೇಕು ನೀವೆ ಹೇಳಿ? ಸಪೋಸ್ ನೀವು 14ನೇ ತಾರೀಖು ಕೊಟ್ಟಿದ್ದರೆ ಏನು ಮಾಡುತ್ತಿದ್ದಿರಿ? ನಿಮಗೂ ಎಷ್ಟೊತ್ತಾದರೂ ಕೊಡುತ್ತೇನೆ.

**ಶ್ರೀ ಪಿ.ಜಿ.ಆರ್. ಸಿಂಧ್ಯಾ:–** ಒಂದೇ ನಿಮಿಷ. ಅವರಿಗೂ ಕೊಡಿ, ನೀವು ಬೇಜಾರು ಮಾಡಿಕೊಳ್ಳಬೇಡಿ, ನಾನು ಒಂದೇ ನಿಮಿಷದಲ್ಲಿ ಮುಗಿಸಿಬಿಡುತ್ತೇನೆ.

**ಅಧ್ಯಕ್ಷರು:–** ನಾವು ಸಿನಿಯಾರಿಟಿ ಮೇಲೆ ಕಒಡುತ್ತೇವೆಂದರೆ ಹೇಗೆ?

ಶ್ರೀ ಪಿ.ಜಿ.ಆರ್. ಸಿಂಧ್ಯಾ:– ಇಷ್ಟೋತ್ತಿಗೆ ಮುಗಿದು ಹೋಗುತ್ತಿತ್ತು. ಇದು ಬಹಳ ಮಹತ್ವದ ವಿಚಾರ.

**ಅಧ್ಯಕ್ಷರು:–** ತಮ್ಮಿಷ್ಟ. ತಮಗೆ ಎಷ್ಟೊತ್ತಾದರೂ ಕೊಡುತ್ತೇನೆ. ಖಂಡಿತವಾಗಿ ಕೊಡುತ್ತೇನೆ.

**ಶ್ರೀ ಪಿ.ಜಿ.ಆರ್. ಸಿಂಧ್ಯಾ:–** ನಾನು ಜಾಸ್ತಿ ಸಮಯ ತೆಗೆದುಕೊಳ್ಳುವುದಿಲ್ಲ. ಅವರಿಗೂ ಅವಕಾಶ ಕೊಡಿ,

**ಅಧ್ಯಕ್ಷರು:–** ತಿಳಿದಿರುವ ತಾವೇ ಈ ರೀತಿ ಮಾಡಿದರೆ ಹೇಗೆ?

**ಶ್ರೀ ಪಿ.ಜಿ.ಆರ್ ಸಿಂಧ್ಯಾ:–** ನಾನು ಈಗ ರೇಸ್ ಮಾಡಬೇಕು, ದಯಮಾಡಿ ಅವಕಾಶ ಕೊಡಿ. ನಾನು ಜಾಸ್ತಿ ಸಮಯ ತೆಗೆದುಕೊಳ್ಳುವುದಿಲ್ಲ.

**ಅಧ್ಯಕ್ಷರು:–** ನಿಮ್ಮಿಷ್ಟ ಸ್ವಾಮಿ. 14ನೇ ತಾರೀಖು ಕೊಟ್ಟಿರುವವರು ಇದ್ದಾರೆ. ಎಲ್ಲಾ ಎರಡೆರಡು ನಿಮಿಷ.

**ಶ್ರೀ ಪಿ.ಜಿ.ಆರ್. ಸಿಂಧ್ಯಾ:–** ಅವರಿಗೂ ಕೊಡಿ, ಸಂಬಂಧಪಟ್ಟ ಸಚಿವರು ಇದ್ದಾರೆ, ಸಂಬಂಧಪಟ್ಟ ಸಚಿವರಿಗೆ ನಾನು ಮಾತನಾಡಿದ್ದೇನೆ, ದಯಮಾಡಿ, ಸದಾನಂದಗೌಡರಿಗೆ ಕೊಡಲು ನನ್ನಂದೇನು ತಕರಾರು ಇಲ್ಲ.

**ಅಧ್ಯಕ್ಷರು:–** ತಳಿದಿರುವ ತಾವೇ ಹೀಗೆ ಮಾಡಿದರೆ ಹೇಗೆ? ಅವರದ್ದು ಆದಮೇಲೆ ತಾವು ಮಾತನಾಡಿ.

**ಶ್ರೀ ಪಿ.ಜಿ.ಆರ್. ಸಿಂಧ್ಯಾ:–** ಆಯಿತು ಅವರಿಗೇ ಕೊಡಿ.

**ಅಧ್ಯಕ್ಷರು:–** ಮೊದಲು ಕೊಟ್ಟಿರುವವರಿಗೆ ನಾವು ಹೀಗೆ ಮಾಡಿಬಿಟ್ಟರೆ ಹೇಗೆ?